ಯಾವುದಾದ್ರೂ ಹಡಗು ಹತ್ತಿ..." ಮಾತು ಮುಗಿಸದೆ ಅವನು ಎರಡು ಬೆರಳಿಂದ ಚಿಟಿಕೆ ಹೊಡೆದ.

ಬಹಳ ಆತಂಕದಿಂದ ಕಾತರಳಾಗಿದ್ದಳು ರಾಕಾ. ಈ ಎಲ್ಲ ವಿಚಾರ ಬಹಳ ಆತ್ಮೀಯ ಗೆಳತಿಗೂ ಹೇಳಿಕೊಳ್ಳೋಕಾಗಲ್ಲ. ಯಾರಿಗೆ ಹೇಳಬಹುದಿತ್ತೋ ಆ ಅಮ್ಮ, ಈಗ ಮೊದಲಿನ ಥರ ಇದ್ದಾಳಾ? ಇದೆಲ್ಲ ಹೇಳೋಕೆ ಹೋದರೆ ಅತಿಗಿಟ್ಟುಕೊಳ್ಳುತ್ತೆ. ಅದೇನಾದ್ರೂ ಆಗ್ಲಿ, ರಾನಾ ತಲೆಯಿಂದ ಈ ವಿಚಾರನ ತೆಗೆದುಹಾಕಲೇಬೇಕು. ಇಲ್ಲದಿದ್ದರೆ...

ಯೋಚಿಸೋಕೂ ಭಯವಾಯ್ತು ರಾಕಾಗೆ. ಇಷ್ಟುದ್ದ ಹುಡುಗ ರಾನಾ! ಒಬ್ಬನೇ ಹೋಗ್ತಾನಾ? ಹಡಗಲ್ಲಿ ಆಗ್ಲಿ ಅಥವಾ ವಿಮಾನದಲ್ಲಿ ಆಗ್ಲಿ, ಪರದೇಶವೇನೂ ನಮ್ಮನೆ ಹತ್ತಿರ ಇದೆಯಾ? ಅಥವಾ ಲಂಡನ್ ಏನು ಚಿಕ್ಕ ಊರಾ? ನಮ್ಮ ಕ್ಲಾಸಿನ ರಿಂಕಿ ರಿಮಾ ಇಬ್ರೂ ಚಿಕ್ಕವರಿದ್ದಾಗ ಲಂಡನ್ನಲ್ಲಿ ಇದ್ರು. ರಾಕಾ ಅವರ ಬಾಯಿಂದ ಕೇಳಿದ್ದಾಳೆ, ಆ ಊರು ತುಂಬಾ ದೊಡ್ಡದು. ಅಲ್ಲಿ ಯಾರ ಬಗ್ಗೆ ಯಾರೂ ತಲೆ ಕೆಡಿಸಿಕೊಳ್ಳೋದಿಲ್ಲ. ಯಾರಿಗೂ ಟೈಮೇ ಇಲ್ಲ. ಅವರವರ ಬದುಕು ಅವರವರದು. ಲಂಡನ್ನಿಂದ ಬರ್ಮಿಂಗ್ ಹ್ಯಾಮ್‌ಗೆ ಹೋಗೋಕೆ ಜಾಸ್ತಿ ಟೈಮ್ ಬೇಕಾಗಿಲ್ಲ ಸರಿ, ಆದರೆ? ಒಂಚೂರು ಗೊತ್ತಿಲ್ಲದ ಊರಲ್ಲಿ ಈ ವಿದೇಶಿ ಚೋಟುದ್ದದ ಹುಡುಗ ಯಾಕೆ ಬಂದಿದ್ದಾನೆ? ಯಾರನ್ನು ಹುಡುಕ್ತಾ ಇದ್ದಾನೆ? ಏನು ಬೇಕು? ಇದೆಲ್ಲ ತಾವಾಗಿಯೇ ಬಂದು ಕೇಳೋಕೆ ಯಾರು ಮುಂದೆ ಬರ್ತಾರೆ? ಒಂದಂತೂ ನಿಜ. ರಾನಾ ಇಂಗ್ಲಿಷ್ ಚೆನ್ನಾಗಿಯೇ ಮಾತಾಡ್ತಾನೆ. ಆದರೂ ಇದೆಲ್ಲ ತಲೆಗೆ ಬಂದ್ರೆ ರಾಕಾಗೆ ನಿದ್ದೇನೇ ಬರೋದಿಲ್ಲ. ರಾನಾ ಜೊತೆ ರಾಕಾ ಏನಾದರೂ ಗುಟ್ಟಾಗಿ ಮಾತಾಡಬೇಕು ಅಂದ್ರೆ ಅದು ರಾತ್ರಿ ಮಾತ್ರ. ಮಾ ಮತ್ತು ಸೈಫುಲ್ ಅಂಕಲ್ ಇಬ್ರೂ ಪಕ್ಕದಲ್ಲೇ ಇರೋ ಬೆಡ್‌ರೂಮಿಗೆ ಹೋಗಿ ಬಾಗಿಲು ಮುಚ್ಚೋ ಮೊದಲು ಇವರಿಬ್ರೂ ಮಲಗಬೇಕು. ಅಕ್ಕಪಕ್ಕ ಎರಡು ಒಂಟಿ ಮಂಚಗಳು, ಮಧ್ಯದಲ್ಲಿ ಟೇಬಲ್ ಲ್ಯಾಂಪ್, ಎರಡು ಲೋಟ ನೀರು, ಪಕ್ಕದಲ್ಲೇ ಒಂದು ಟ್ರೇನಲ್ಲಿ ಅಮ್ಮ ಕಿತ್ತಳೆ, ಸೇಬು ಇಟ್ಟು ಹೋಗ್ತಾಳೆ. ಬರೀ ಹಣ್ಣು ಮಾತ್ರ ಅಲ್ಲ ಬಿಸ್ಕತ್ತೂ ಇರ್ತವೆ, ಯಾರಿಗಾದ್ರೂ ಹಸಿವಾದ್ರೆ. ನಿದ್ದೆ ಮಾಡದೆ ಎಚ್ಚರವಿದ್ದಾಗ ಅವರು ತಿಂತಾರೆ. ರಾಕಾ ಒಂದಿನ ಹಠಾತ್ತಾಗಿ ರಾನಾಗೆ ಕೇಳಿದಳು, "ಏನೋ, ಆ ಹುಚ್ಚು ನಿನ್ನ ತಲೆಯಿಂದ ಹೋಯ್ತಾ?''

"ನಾನು ಹೇಗೆ ಹೋಗಲಿ? ಯಾರು ನನಗೆ ಮಾತು ಕೊಟ್ಟಿದ್ದನೋ ಅವನು ನನ್ನ ಜೊತೆ ಚಾಟ್ಗಾ ತನಕ ಬರ್ತೀನಿ ಅಂದಿದ್ದ, ಅವನು ಬರಲಿಲ್ಲ, ಒಬ್ಬನೇ ಆ ಥರ ಹೋಗೋದು ಹೇಗೆ? ದೀದಿ, ನೀನು ನನ್ನ ಜೊತೆ'' ಅಂದವನೆ ತನಗೆ ತಾನೇ, "ಆಗಲ್ಲ ನಿನಗೆ, ಹೇಳಿ ಪ್ರಯೋಜನವಿಲ್ಲ, ನೀನು ಅಮ್ಮನ ಬಾಲ" ಅಂದ.

"ಇಲ್ಲ, ನೀನು ತಪ್ಪು ತಿಳ್ಕೊಂಡಿದ್ದೀಯಾ. ನಾನು ಬರಬಹುದು. ಆದರೆ, ಈ ಥರ ತರಾತುರಿಯಲ್ಲಿ ಅಲ್ಲ. ಬಾಬಾ ಎಲ್ಲಿದಾನೆ ಅಂತ ಸರಿಯಾಗಿ ತಿಳ್ಕೋಬೇಕು. ಬಾಬಾಗೆ ಕೂಡ ಹೇಳಬೇಕು. ನಾವು ಬರ್ತಾ ಇದಿವಿ ಅಂತ."

"ನಾನು ಎಷ್ಟು ಪ್ರಯತ್ನಿಸಿದ್ದೀನಿ, ಯಾರೂ ಹೇಳ್ತಾ ಇಲ್ಲ."

"ಹಾಗಾದರೆ ಒಂದು ಕೆಲಸ ಮಾಡು. ಬಾಬಾನದು ಪಾಸ್‌ಪೋರ್ಟ್ ಸೈಜಿನದು ಒಂದು ಡಜನ್ ಫೋಟೊ ಪ್ರಿಂಟ್ ಹಾಕಿಸು, ಇಂಗ್ಲೆಂಡಿಗೆ ಹೋಗಿಬರೋರಿಗೆ ಒಂದು ಕಾಪಿ ಕೊಡು. ಯಾರಿಗಾದರೂ ಬಾಬಾ ಭೇಟಿಯಾದರೆ ನಮಗೆ ಅವರ ವಿಳಾಸ ತಿಳಿಸೋಕೆ ಹೇಳು."

"ವಾಹ್, ಸೂಪರ್ ಐಡಿಯಾ! ನೀನು ಅಷ್ಟು ಜಾಣೆ ಅಲ್ಲದಿದ್ದರೆ ರಾನಾ ಯಾಕೂಬ್ ದೀದಿ ರಾಕಾ ಯಾಕೂಬ್ ಆಗ್ತಿದ್ದೆಯಾ!"

"ಹಾಗಾದ್ರೆ, ಪ್ರಾಮಿಸ್ ಮಾಡು. ನೀನು ಏನು ಮಾಡ್ಬೇಕು ಅಂತಿದೆಯೋ ಅದನ್ನ ನನಗೆ ಹೇಳಿಯೇ ಮಾಡ್ತಿನಿ ಅಂತ."